

ಈಗ ಹೊಸ ಹೊಸ ಮಾದರಿಯ, ನವನವೀನ ವಿನ್ಯಾಸದ ಸೀರೆಗಳು ಮಾರುಕಟ್ಟೆಯಲ್ಲಿ ಲಭ್ಯ. ಇದಕ್ಕೆ ನವಿಲು ವಿನ್ಯಾಸದ ಸೀರೆಗಳು ಹೊಸ ಸೇಪರ್ಡೆ. ಫ್ಯಾಷನ್‌ಪ್ರಿಯ ಮಹಿಳೆಯರಿಗೆ ಈ ಸೀರೆಗಳನ್ನು ಅಂಗಡಿಗಳಿಗೆ ಬಂದೊಡನೆಯೇ ಆಯ್ದುಕೊಂಡು ತಮ್ಮ ಸೀರೆಯ ಕಪಾಟಿಗೆ ಸೇರಿಸಿದಾಗಲೇ ಸಮಾಧಾನ. ಮಹಿಳೆಯರ ಈ ಅಭಿರುಚಿಯನ್ನೇ ಬಂಡವಾಳ ಮಾಡಿಕೊಳ್ಳಲು ಹೊರಟಿರುವ ವಸ್ತ್ರ ವಿನ್ಯಾಸಕ ಸಂಸ್ಥೆಗಳು ಹೊಸ ಮಾದರಿಯ ಸೀರೆಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡುತ್ತಲಿವೆ. ಗ್ರಾಹಕರ ಅಭಿರುಚಿಗೆ ತಕ್ಕಂತೆ ಸೀರೆಗಳನ್ನು ವಿನ್ಯಾಸ ಮಾಡಲೆಂದೇ ಆಧುನಿಕ ತಂತ್ರಜ್ಞಾನವನ್ನು ಬಳಸಿ ವಿನ್ಯಾಸ ಮಾಡಬಲ್ಲ ಹಲವಾರು ವಿನ್ಯಾಸಕರು ಇಂದು ಮುಂಚೂಣಿಯಲ್ಲಿ ನಿಂತಿದ್ದಾರೆ. ಅಂತಹ ವಿನ್ಯಾಸಕಾರರಿಂದ ರೂಪಿತವಾದ ಹೊಸ ವಿನ್ಯಾಸವೇ ನವಿಲು ವಿನ್ಯಾಸ.

ನವಿಲು ಸೌಂದರ್ಯರಾಣಿ. ಸೌಂದರ್ಯದ ಖನಿ. ತನ್ನ ಗರಿಗಳನ್ನು ಅಗಲಿಸಿ ನೃತ್ಯ ಮಾಡಲು ಪ್ರಾರಂಭಿಸಿತೆಂದರೆ ಅದರ ಅಂದಕ್ಕೆ ಮಾರುಹೋಗದವರಿಲ್ಲ. ಅಬಾಲವೃದ್ಧರಾದಿಯಾಗಿ ಎಲ್ಲರನ್ನೂ ಸೂಜಿಗಲ್ಲಿನಂತೆ ಸೆಳೆಯುವ ವೈಯ್ಯಾರ ಅದರದ್ದು. ಅದೇ ಕಲ್ಪನೆಯಲ್ಲಿ ವಿನ್ಯಾಸಕಾರರೂ ಸಹ ತಮ್ಮ ಸೀರೆಯ ವಿನ್ಯಾಸಗಳಲ್ಲಿ ನವಿಲಿನ ಗರಿ ಹಾಗೂ ನಾಟ್ಯಶೈಲಿಗಳನ್ನೊಳಗೊಂಡ ವಿಭಿನ್ನ ಭಂಗಿಗಳನ್ನು ವಿನ್ಯಾಸಗೊಳಿಸಿದ್ದಾರೆ. ಆ ಸೀರೆಗಳನ್ನು ಉಟ್ಟವರೂ ಕೂಡ ನವಿಲಿನಂತೆಯೇ ವೈಯ್ಯಾರದಿಂದ ಬಳುಕುವಂತೆ ಕಾಣುವಂತೆ ವಿನ್ಯಾಸ ಮಾಡಿದ್ದಾರೆ. ಸೀರೆಯ ಸೆರಗಿನಲ್ಲಿ ನವಿಲುಗರಿಯನ್ನು ಬಿಚ್ಚಿರುವ ಭಂಗಿಯ ಚಿತ್ರವಿರುವಂತೆ ವಿನ್ಯಾಸಗಳನ್ನು ರೂಪಿಸಲಾಗಿದ್ದು ಅಂತಹ ಸೆರಗಿನ ಸೀರೆಗಳಿಗೆ ಮಾರುಕಟ್ಟೆಯಲ್ಲಿ ಬಹಳಷ್ಟು ಬೇಡಿಕೆಯಿದೆ. ಇದೊಂದು ಟ್ರೆಂಡ್ ಆಗಿ ರೂಪುಗೊಳ್ಳುತ್ತಿದ್ದು ತಮ್ಮ ವಿನ್ಯಾಸಕ್ಕೆ ಸಿಕ್ಕ ಅಭೂತಪೂರ್ವ ಯಶಸ್ಸಿನಿಂದ ಉತ್ತೇಜಿತರಾಗಿರುವ ವಿನ್ಯಾಸಕಾರರು ಹೊಸ ವಿನ್ಯಾಸಗಳ ರಚನೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ದಿನ ಬಳಕೆಯ ಸೀರೆಗಳಿಗೆ ಮಾತ್ರ ಸೀಮಿತವಾಗಿದ್ದ ಈ ಟ್ರೆಂಡ್ ಈಗ ದುಬಾರಿ ಬೆಲೆಯ ರೇಷ್ಮೆ ಸೀರೆಗಳಿಗೂ ಅಂಟಿಕೊಂಡಿದ್ದು ಕಾಂಟ್ರಾಸ್ಟ್ ಬಣ್ಣದ ಕಾಂಬಿನೇಷನ್ ಇದ್ದರಂತೂ ಇವುಗಳು 'ಸಿಂಪ್ಲೀ ಸೂಪರ್ಬ್' ಎನ್ನಿಸುತ್ತವೆ. ನವಿಲಿನ ವಿನ್ಯಾಸವಲ್ಲದೇ ನವಿಲುಗರಿ ಇರುವ ಸೀರೆಗಳೂ ಲಭ್ಯವಿವೆ. ಸಾಮಾನ್ಯವಾಗಿ ರೆಡಿಮೇಡ್ ಸೀರೆಗಳಲ್ಲಿಯೇ ಈ ವಿನ್ಯಾಸ ಹೆಚ್ಚು ಪ್ರಚಲಿತವಾಗಿದೆ. ಸಿಂಪಲ್ ಸೀರೆಗಳಲ್ಲಿ ಕೇವಲ ಸೆರಗಿನಲ್ಲಿ ಮಾತ್ರ ನವಿಲಿನ ವಿನ್ಯಾಸ ಕಂಡುಬರುತ್ತದೆ. ಕೆಲವು ಸೀರೆಗಳ ಸೆರಗಿನಲ್ಲಿಯಲ್ಲದೇ ಒಡಲಲ್ಲಿಯೂ ಅಲ್ಲಲ್ಲಿ ದೊಡ್ಡದಾದ ನವಿಲಿನ ವಿನ್ಯಾಸ ಕಂಡುಬರುತ್ತದೆ. ನವಿಲಿನ ವಿನ್ಯಾಸದಲ್ಲಿ ಕುಂದನ್ ಮತ್ತು ಹರಳುಗಳ ಕುಸುರಿಯನ್ನೂ ಕಾಣಬಹುದಾಗಿದೆ. ಲೈಟ್ ಕಲರ್‌ಗಳಿಗಿಂತ ಕಡುಬಣ್ಣದ ಸೀರೆಗಳಿಗೇ ಹೆಚ್ಚು ಬೇಡಿಕೆಯಿದೆ ಎಂಬುದು ಸೀರೆ ಅಂಗಡಿಯ ಮಾಲೀಕರ ಅಭಿಪ್ರಾಯ.

